ನಡೆಯುತ್ತಿದೆ ಎನ್ನುವಂತೆ ಕಣ್ಸನ್ನೆಯಲ್ಲೇ ಕೇಳಿದರು.

ಹನ್ನೊಂದಕ್ಕೆ ಆರಂಭವಾದ ಮೀಟಿಂಗ್ ಮೂರು ಗಂಟೆವರೆಗೂ ನಡೆಯಿತು. ರಾಘವನ್ ತಮ್ಮ ಸರ್ವೀಸ್ ಉದ್ದಕ್ಕೂ ಕಂಡ, ಕೇಳಿದ ಅನುಭವಗಳ ಜತೆಗೆ ದಕ್ಷಿಣ ರಾಜ್ಯಗಳ ಜನರ ಸ್ವಭಾವ ಮತ್ತು ಸಮಾಜಘಾತುಕ ಶಕ್ತಿಗಳ ಮೋಡಸ್ ಅಪರೆಂಡಿಗಳನ್ನೆಲ್ಲ ವಿವರವಾಗಿ ಬಿಚ್ಚಿಟ್ಟರು. ಮೋಸ್ಟ್ ವಾಂಟೆಡ್ ಆಸಾಮಿಗಳ ಜೀವನ ಶೈಲಿ, ಹವ್ಯಾಸ ಇತ್ಯಾದಿಗಳು ಹೇಗಿರ್ತವೆ. ಅವು ಹೇಗೆ ಬದಲಾಗ್ತ ಹೋಗ್ತವೆ ಅನ್ನೋದನ್ನು ವಿವರವಾಗಿ ಹೇಳಿದರು.

ಕೆಬಿ ಜತೆಗೆ ಇನ್ನೂ ಕೆಲವರು ಬಂದಿರಬಹುದು. ಅವರು ಏನೂ ಮಾಡದೇ ಇರಬಹುದು. ನೀವು ಓಪನ್ ಆಗಿ ಕೂಂಬಿಂಗ್ ಆಪರೇಷನ್ ಮಾಡೋದು ಬೇಡ. ಮೊದಲು ಇಂಟೆಲಿಜೆನ್ಸ್ ಸ್ಟಾಫ್ ಮೂಲಕ ಮಾಹಿತಿ ಕಲೆ ಹಾಕಿ. ಅಗತ್ಯಬಿದ್ದರೆ ಹೊರಗಿನವರನ್ನೂ ಕರೆಸಿ. ಮೆಡಿಕಲ್ ರೆಪ್‌ಗಳು, ತಳ್ಳುಗಾಡಿ ವ್ಯಾಪಾರಿಗಳು, ಕಟ್ಟಡ ಕೂಲಿಗಳು, ಜನ ಸಾಮಾನ್ಯರು, ಪಿಂಪ್‌ಗಳಂತೆ ಸಿಟಿಯಲ್ಲಿ ಓಡಾಡಿಕೊಂಡು ಮಾಹಿತಿ ಕಲೆ ಹಾಕಲಿ. ಇದು ತುಂಬಾ ಸೀರಿಯಸ್ ವಿಷಯ. ಮೂರೂ ರಾಜ್ಯ ಸರ್ಕಾರಗಳ ಹೋಂ ಸೆಕ್ರೆಟರಿಗಳ ಜತೆ ನಾನು ಮಾತಾಡ್ತೀನಿ...

ಸೈಲೆಂಟ್ ಆಪರೇಷನ್‌ಗಳಿಂದ ಪ್ರಯೋಜನ ಇಲ್ಲ, ವೇಸ್ಟ್ ಎಕ್ಸರ್‌ಸೈಜ್ ಅನ್ನೋ ತೀರ್ಮಾನಕ್ಕೆ ನೀವು ಬರೋದು ಬೇಡ. ಈ ಆಪರೇಷನ್ ಮೂರು ತಿಂಗಳಲ್ಲಿ ಮುಗಿಯಬಹುದು ಅಥವಾ ಅದಕ್ಕಿಂತ ಹೆಚ್ಚು ಸಮಯ ಹಿಡೀಬಹುದು ಅಂತ ರಾಘವನ್ ಖಡಕ್ ಧ್ವನಿಯಲ್ಲಿ ಹೇಳಿ ಮೀಟಿಂಗ್ ಮುಗಿಸಿದರು.

ರಾಘವನ್ ಅವರನ್ನು ಬೀಳ್ಕೊಟ್ಟ ಮೇಲೆ ಮನೆಗೂ ಹೋಗದೆ ಪುರಿ ಸಾಹೇಬರು ಕಮೀಷನರೇಟ್ ವ್ಯಾಪ್ತಿಯ ಎಸ್‌ಪಿಗಳು ಮತ್ತು ಎಸಿಪಿಗಳ ಜತೆ ಮೀಟಿಂಗ್ ಮಾಡಿದರು. ರಾಘವನ್ ಸಾಹೇಬರು ಹೇಳಿದ ವಿಷಯಗಳು ಇಲಾಖೆಯ ಕೆಳ ಹಂತದ ಸಿಬ್ಬಂದಿಗೆ ಗೊತ್ತಾಗದಂತೆ ಎಚ್ಚರವಹಿಸಬೇಕು. ಯಾರನ್ನೂ ನಂಬುವಂತಿಲ್ಲ. ಕೆಲವರನ್ನು ಮಾತ್ರ ವಿಶ್ವಾಸಕ್ಕೆ ತೆಗೆದುಕೊಂಡು ಎಲ್ಲ ಮಾಹಿತಿಗಳನ್ನು ಅವರಿಗೂ ತಿಳಿಸದೆ ಕೆಲಸ ಮಾಡಿಸಬೇಕು ಎಂದು ತೀರ್ಮಾನಿಸಿದರು.

★★★

ದಿನಗಳು ಉರುಳಿದವು. ಪೆದ್ದಾಯನ ಹೇಳಿದ್ದ ಬಾಲಗೋವಿಂದ ಬರಲೇ ಇಲ್ಲ. ಚಿಟ್ಟಿಬಾಬು ಕಾಟನ್ ಮಿಲ್ ಒಂದರಲ್ಲಿ ದಿನಗೂಲಿಯಾಗಿ ಸೇರಿಕೊಂಡ. ಪೋತರಾಜು ಗುಂಟೂರು ಕಡೆಯವರ ಪೂರ್ಣಚಂದ್ರ ಹೆಸರಿನ ಕೋಳಿ ಫಾರಂಗೆ ಸೇರಿಕೊಂಡು ಸಿಟಿಯಲ್ಲಿರೊ ನಾನ್‌ವೆಜ್ ಹೋಟೆಲುಗಳು, ಬಾರುಗಳಿಗೆ ವಾರಕ್ಕೆ ಮೂರು ಸಲ ಕೋಳಿಗಳನ್ನು ಸರಬರಾಜು ಮಾಡುವ ವ್ಯಾನೊಂದರಲ್ಲಿ ಓಡಾಡತೊಡಗಿದ. ವೆಂಕಟಗಿರಿ ದಿನವಿಡೀ ಮುತ್ಯಾಲನ ಮನೆಯ ಮುಂದೆ ಕೂತು ಕೊಂಡಯ್ಯ ಮತ್ತು ಬಾಲಗೋವಿಂದರ ದಾರಿ ನೋಡತೊಡಗಿದ. ಬೇಸರವಾದರೆ ಚೆನ್ನಪ್ಪ ಸರ್ಕಲ್‌ವರೆಗೆ ನಡೆದುಕೊಂಡು ಹೋಗುತ್ತಿದ್ದ. ಅಲ್ಲಿಗೆ ಹೋದ ಮೇಲೆ ಯಾವುದಾದರೂ ಸಿನಿಮಾ ನೋಡಬೇಕು ಅಂತ ಅಂದುಕೊಳ್ಳುತ್ತಿದ್ದ. ಆದರೆ ಸಿನಿಮಾ ನೋಡುತ್ತ ಕೂತಿದ್ದಾಗ ಕೊಂಡಯ್ಯ ಅಥವಾ ಬಾಲಗೋವಿಂದ ಬಂದುಬಿಟ್ಟರೆ ಕೆಲಸ ಕೆಡುತ್ತದೆ ಅನ್ನಿಸಿ ಗಡಿಬಿಡಿಯಿಂದ ಮನೆಗೆ ಬಂದು ಬಿಡುತ್ತಿದ್ದ. ಹೆಚ್ಚು ಕಡಿಮೆ ದಿನವೂ ಹೀಗೇ ಮಾಡುತ್ತಿದ್ದ.

ಒಂದು ದಿನ ಬೆಳ್ಳಂಬೆಳಿಗ್ಗೆ ಲಕ್ಷ್ಮಿಯನ್ನು ಕೇಳಿಕೊಂಡು ಒಬ್ಬ ಹೆಂಗಸು ಮನೆಯ ಬಳಿ ಬಂದಳು. ಮೂರು ದಿನಗಳಿಂದ ಲಕ್ಷ್ಮಿ ಕೆಲಸಕ್ಕೆ ಬರುತ್ತಿಲ್ಲ ಏಕೆ ಅನ್ನೋದು ಅವಳ ಪ್ರಶ್ನೆ.

ನಾ ಪೆಳ್ಳಾಮಿಕಿ ಒಂಟ್ಲಲ್ಲೊ ಬಾಗಲೇದು ಎಂದು ಮುತ್ಯಾಲ ಆ ಹೆಂಗಸಿಗೆ ಹೇಳುತ್ತಿದ್ದುದು ಓನರ್ ಮನೆಯ ಜಗುಲಿ ಮೇಲೆ ಮಲಗಿದ್ದ ವೆಂಕಟಗಿರಿ ಕಿವಿ ಮೇಲೆ ಬಿತ್ತು. ಕಡಪಾದಿಂದ ಹೊರಡುವ

